ಹೊರಟು ನಿಂತಳು. ಅಂದು ಕಡೆಯಲ್ಲಿ ಅವಳಿಗೆ ಮೂಡಿದ ಭಾವನೆಯೊಂದೇ... ತಂತ್ರಜ್ಞಾನ ಎಷ್ಟೇ ಮುಂದುವರಿದು ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದ್ದರೂ ನಿರಂತರ ವಿಕಸನದಂತೆ ಸದಾ ಉತ್ತಮಪಡಿಸಿಕೊಳ್ಳಬೇಕೆಂಬ ವಾಂಛೆ ಮನುಜ ಸಹಜ ಪ್ರವೃತ್ತಿಯನ್ನು ಬದಲಾಯಿಸದೇನೋ? ಬದುಕಿನ ಹೇರಳ ಅವಕಾಶಗಳನ್ನು ಹೆಕ್ಕಿಕೊಳ್ಳುತ್ತಾ ತಮ್ಮ ಮಡಿಲು ತುಂಬಿಕೊಳ್ಳುವಾಗ ಆ ಅವಕಾಶಗಳಿಗೆ ಒಂದಿಷ್ಟು ಪೋಷಣೆ ನೀಡಿದರೆ ಸಾಕು.

'ಅವಿರತ್, ನಾವು ಅದೆಷ್ಟೇ ನಮ್ಮ ಕಾರ್ಯ ಉತ್ತಮಪಡಿಸಿಕೊಳ್ಳಬೇಕೆಂದರೂ ಮನುಷ್ಯನಲ್ಲಿನ ಕೆಲವು ಮಿತಿಗಳು ಅವನಿಂದ ಅಪಘಾತಗಳನ್ನು ಮಾಡಿಸುತ್ತವೆ. ಆ ಮಿತಿಗಳನ್ನು ಮೀರಿ ನರಗಳ ದೌರ್ಬಲ್ಯವನ್ನು ಹೋಗಲಾಡಿಸುವುದರ ಮೂಲಕ ಇಲ್ಲವೇ ಅವನ ದೇಹಪ್ರಕೃತಿಗೆ ಸರಿಹೊಂದುವಂತೆ ಹೊಂದಾಣಿಕೆಯ ಉಪಕರಣಗಳನ್ನು ಅಭಿವೃದ್ಧಿ ಪಡಿಸಿದರೆ ಅಪಘಾತಗಳನ್ನು ತಪ್ಪಿಸಬಹುದಲ್ಲವೇ.'

'ನಾವು ವಿವಿಧ ಸಂದರ್ಭಗಳಲ್ಲಿ ಮನುಷ್ಯನ ವರ್ತನೆ ಏನಿರಬಹುದೆಂಬುದನ್ನು ಊಹಿಸಬಲ್ಲೆವು. ಆದರೆ ಅದು ಬರೀ ಊಹೆಯಾಗಿರದೆ ವೈಜ್ಞಾನಿಕವಾಗಿ ಒಂದು ನಿರ್ದಿಷ್ಟ ಅಬಿಪ್ರಾಯಕ್ಕೆ ಬರುವಂಥಹದ್ದಾಗಿರಬೇಕು.

'ಅಭಿಪ್ರಾಯಕ್ಕಷ್ಟೇ ಈ ಅಧ್ಯಯನ ನಿಲ್ಲದೆ ಪರಿಹಾರೋಪಾಯಗಳು ಅದನ್ನನುಸರಿಸಿ ಬರಬೇಕು.'

'ಅದನ್ನೇ ಈ ಆರ್ ಅಂಡ್ ಡಿ ವಿಭಾಗದಲ್ಲಿ ಸಂಶೋಧನೆ ಮಾಡಲಾಗುತ್ತಿದೆ. ಮುಂಬರುವ ತಿಂಗಳುಗಳಲ್ಲಿ ಈ ಯೋಜನೆಗೆ ಒಂದು ಅರ್ಥ ಸಿಗಬಹುದು.'

'ಅಂತೂ ಎಲ್ಲರಿಗೂ ಒಳ್ಳೆಯ ಸುದ್ದಿ ಕಾದಿದೆ.' ಹೀಗೆನ್ನುತ್ತಾ ಅವರು ಅನೆಕ್ಸ್ ಕಟ್ಟಡದ ಮತ್ತೊಂದು ವಿಂಗ್‌ನಲ್ಲಿದ್ದ ಅವಿರತ್‌ನ ಕ್ಯಾಬಿನ್‌ಗೆ ಹಿಂದಿರುಗಿದ್ದರು.

'ಅವಿರತ್, ಅಂತೂ ನನ್ನ ಅರಿವಿನ ಕಿಟಕಿಯನ್ನು ತೆರೆಸಿದಿರಿ. ನಿಮ್ಮ ಈ-ವ್ಯಾಲೆಟ್‌ನಲ್ಲಿ ಇನ್ನೆಷ್ಟು ವಿಚಾರಗಳಿವೆ?'

'ಓ... ನೋ... ನನಗೆ ನಿಮ್ಮ ಅರಿವಿನ ಕಿಟಕಿಯನ್ನು ತೆರೆಸುವ ಮತ್ತಷ್ಟು ಕೆಲಸಗಳನ್ನು ನೀಡಬೇಡಿ. ಗಂಡಸರ ವ್ಯಾಲೆಟ್ ವಿಚಾರ ನಿಮಗೇಕೆ?'

'ಹಾಗೇನು? ನನಗೆ ನಿಮ್ಮ ಈ-ವ್ಯಾಲೆಟ್ ಖಾಲಿ ಮಾಡಿಸುವ




ಇರಾದೆಯೇನೂ ಇಲ್ಲ. ಆದರೆ, ನನಗೆ ಸಂಚಾರ ವಿಭಾಗದಿಂದ ಫ್ರೀ ಆಫರ್ ಬಂದಿದೆ. ಇಬ್ಬರಿಗಾಗಬಹುದು. ಅರ್ಥಾತ್ ನಾನು ನನ್ನೊಂದಿಗೆ ಒಂದು ರಮಣೀಯ ತಾಣಕ್ಕೆ ಮತ್ತೊಬ್ಬರನ್ನು ಕರೆದೊಯ್ಯುವ ಆಫರ್ ಸಿಕ್ಕಿದೆ!' ಎಂದು ಕಣ್ಣರಳಿಸಿದಳು. ಅವಳ ಮನೋ ಇಂಗಿತವನ್ನು ಗ್ರಹಿಸದೆ ಅವಿರತ್ ಮರು ಪ್ರಶ್ನಿಸಿದ.

'ಯಾವ ಆಫರ್. ಅದಕ್ಕೂ ನನಗೂ ಏನು ಸಂಬಂಧವಿದೆ?'

ಅವನ ಮಾತು ಅವಳ ಉತ್ಸಾಹಕ್ಕೆ ತಣ್ಣೀರೆರಚಿದಂತಾಗಿತ್ತು. ಕೆಲವು ದಿನಗಳ ಹಿಂದೆ ತನ್ನೊಂದಿಗೆ 'ನವಗ್ರಹ ಕೇಂದ್ರ'ದ 'ಶುಕ್ರವಾಸಿನಿ'ಯಲ್ಲಿ ಉಪಹಾರ ಸೇವಿಸಿದ್ದನ್ನು ನೆನೆದು ಅವನನ್ನು ಆ ತಾಣಕ್ಕೆ ಕರೆಯಬೇಕೆಂದುಕೊಂಡಿದ್ದ ಮಾತುಗಳು ಗಂಟಲಲ್ಲೇ ಉಳಿದವು.

'ಸಂಬಂಧವೇನೂ ಇಲ್ಲ. ಹೀಗೇ ವಿಹಾರಕ್ಕೆ ನನ್ನೊಂದಿಗೆ ಬರುವಿರೇನೋ ಎಂದು ತಿಳಿದಿದ್ದೆ' ತಡೆದು ತಡೆದು ಹಿಂಜರಿಕೆಯಿಂದ ನುಡಿದಳು.

'ವಿಹಾರವೇ? ಸ್ವಲ್ಪ ಸ್ಪಷ್ಟವಾಗಿ ಹೇಳಿ.'

'ಅಂತಹದ್ದೇನೂ ಇಲ್ಲ. ವಾಕ್ ಥ್ರೂ ಮಲ್ಟಿ ಡೈಮೆನ್ಷನ್ ಚಿತ್ರ ಪ್ರದರ್ಶನಕ್ಕೆ ಎರಡು ಪಾಸುಗಳು ಲಭಿಸಿವೆ. ನನ್ನೊಂದಿಗೆ ನೀವೂ ಬರ್ತೀರೇನೋ ಅಂತಾ...' ಅವಿರತ್‌ಗೆ ಈಗ ತಮಾಷೆ ಸಲ್ಲದೆನಿಸಿತ್ತು.

'ಮ್ಯಾಮ್. ಈ ತನಿಖೆ, ಡೇಟಾ ಅನಾಲಿಸಿಸ್ ಮಧ್ಯೆ ಅಲ್ಲಿಗೆ ಬರೋದಿಕ್ಕೆ ಬಿಡುವಾಗುತ್ತದೋ ಇಲ್ಲವೋ ಗೊತ್ತಿಲ್ಲ. ನನಗೆ ಅದರ ವಿವರಗಳನ್ನು ಶೇರ್ ಮಾಡಿ. ಸಾಧ್ಯವಾದರೆ ತಿಳಿಸುತ್ತೇನೆ. ಆದರೆ ನಿಮ್ಮಂತಹ ಯುವತಿಯ ಜೊತೆ ರಮಣೀಯ ತಾಣಕ್ಕೆ ಹೋಗುವ ಅವಕಾಶವನ್ನಂತೂ ತಪ್ಪಿಸಿಕೊಳ್ಳುವುದಿಲ್ಲ. ನನ್ನನ್ನು ಆಹ್ವಾನಿಸಿದ್ದಕ್ಕೆ ಥ್ಯಾಂಕ್ಸ್' ಎಂದಾಗ ಹನ್ಸಾಳಿಗೆ ನಿರಾಳವಾಗಿತ್ತು.

* * *

ಅಂದು ಅವಳು ಬಹಳ ಕಾತುರದಿಂದ ಕಾಯುತ್ತಿದ್ದ ಗಳಿಗೆ ಆಗಮಿಸಿತ್ತು. ತನ್ನ ಹಾಗೂ ಅವಿರತ್‌ನ ಅನುಕೂಲಕರ ಸಮಯ ನೋಡಿಕೊಂಡು ಅವರು ಆ ಭವ್ಯ ಕಟ್ಟಡದೊಳಗೆ ಹೋದಾಗ ಅವರಂತೆಯೇ ಹಲವರು ಅಲ್ಲಿಗೆ ಆಗಲೇ ಆಗಮಿಸಿಯಾಗಿತ್ತು.

ಇನ್ನೇನು ಅಲ್ಲಿನ ತಂತ್ರಜ್ಞಾನದ ಕೈಚಳಕದಡಿ ಸುಂದರ ನಿಸರ್ಗದ ಮಡಿಲಲ್ಲಿನ ಕಥೆ ಅನಾವರಣಗೊಳ್ಳಲಿತ್ತು. ಅವಳು ಚಿಕ್ಕಂದಿನಿಂದ ಮನರಂಜನೆಯ ಮೊರೆ ಹೋಗಿದ್ದು ಕಡಿಮೆಯೇ ಆದರೂ ಅವಳ ಮೈ ಮನಸ್ಸು ಹೊರಗಿನ ಪ್ರಪಂಚದ ಆಗುಹೋಗುಗಳಿಂದ ಜರ್ಜರಿತವಾಗಿ ಮನೆ ತಲುಪಿ ಹಾಸಿಗೆಯ ಮೇಲೆ ವಿರಮಿಸಿದರೆ ಸಾಕೆನಿಸುತ್ತಿತ್ತು. ಅಪರೂಪಕ್ಕೆ ಒದಗಿ ಬಂದ ಅವಕಾಶವನ್ನು ಬಳಸಿಕೊಳ್ಳಲು ಒಬ್ಬರಿಗಿಂತ ಈರ್ವರಿದ್ದರೆ ಹೆಚ್ಚು ಖುಷಿ ನೀಡಬಹುದೆಂದು ಪರಿಗಣಿಸಿಯೇ ಏನೋ ತನಗೆ ಎರಡು ಪಾಸ್‌ಗಳನ್ನು ನೀಡಿದ್ದು!

ಅವರು ಒಳಗೆ ಕಾಲಿರಿಸಿದಾಗ ಬೆಳಕಿನ ಲೋಕದ ವಿಸ್ಮಯಗಳು ಒಂದೊಂದೂ ವಾಕ್ ಥ್ರೂ ಗ್ಯಾಲರಿಯಲ್ಲಿ ನೈಜವೆಂಬಂತೆ ಪ್ರದರ್ಶನಗೊಳ್ಳುತ್ತಿದ್ದವು.

ಹಳ್ಳಿಯಲ್ಲಿನ ಬೆಟ್ಟದ ಮೇಲೊಂದು ಗುಡಿಸಲು. ಸುತ್ತಲೂ ಕಾನನದ ಮರಗಿಡಗಳು ಬೆಳೆದುಕೊಂಡು ಹಲವೆಡೆ ಹೂ ಮರಗಳು ಹೂಗುಚ್ಛದಂತೆ ಹರಡಿಕೊಂಡಿದ್ದವು. ವಿವಿಧ ವರ್ಣದ ಹೂಮರಗಳು ಹೂ ಬಿರಿಯುವೆಡೆ ಹಕ್ಕಿಗಳು ಚಿಲಿಪಿಲಿಗುಟ್ಟಿದ್ದವು. ಸುಮಾರು ಹತ್ತು ನಿಮಿಷ ಈ ರಮಣೀಯ ನೋಟವನ್ನು 3ಡಿ ದೃಶ್ಯಾವಳಿಗಳಲ್ಲಿ ತೋರಿಸುವಾಗಲೇ ಅಲ್ಲಿನ ಬದಿಯ ಗ್ಯಾಲರಿಯಲ್ಲಿನ ಜಲಧಾರೆಯು ಅವರ ಕಾಲ್ಗಳವರೆಗೂ ನೀರು ಹರಿಸಿ, ಅವರ ಮುಖಗಳ ಮೇಲೆ ತುಂತುರು ಹನಿಗಳನ್ನು ಸಿಂಪರಿಸಿತ್ತು. ಆ ಜಲಧಾರೆಯ ಹಿಂದಿನ ಬಂಡೆಗಳ ನಡುವೆ ಗುಹೆಯೊಂದಿದ್ದು, ಓರ್ವ ಸುಂದರಾಂಗಿ ಆ ಜಲಧಾರೆಯನ್ನು ದಾಟಿ ಹೊರ ಬಂದಾಗ ಹನ್ಸಾಳಿಗೆ ಆ ಯುವತಿ ತಮ್ಮ ಸಮೀಪದಲ್ಲೇ ಹಾದುಹೋದಂತೆ ಅನಿಸಿ ಅವಿರತ್‌ನನ್ನು ಅಚಾನಕ್ಕಾಗಿ ಹಿಂದಕ್ಕೆಳೆದುಕೊಂಡಿದ್ದಳು.

ಕಥೆಯು ಎಳೆಎಳೆಯಾಗಿ ಸಾಗಿದಂತೆಲ್ಲ ಹಲವಾರು ವಿವಿಧ ಗ್ಯಾಲರಿಗಳನ್ನು ದಾಟಿದ್ದು, ತಮ್ಮೊಂದಿಗೆ ಹಲವು ಅನುಭವಗಳನ್ನು ಪಡೆದಿದ್ದರು. ಅವರಂತೆಯೇ ಅಲ್ಲಿ ಪ್ರದರ್ಶನ ವೀಕ್ಷಿಸುತ್ತಿದ್ದ ಇತರ ಸಾರ್ವಜನಿಕರ ಅನುಭವ ಭಿನ್ನವಾಗೇನೂ ಇರಲಿಲ್ಲ.

ಅನೇಕ ವಿಶೇಷ ಸಂವೇದಿಗಳೂ ಮುಂದುವರಿದ ದ್ಯುತಿ ಪಟ್ಟುತ್ವ ಹಾಗೂ